

ಯಾರೊಡನೆಯೂ ಹೇಳಿಕೊಳ್ಳಲಾಗದ ಲೈಂಗಿಕ, ದಾಂಪತ್ಯ ಮತ್ತು ಮಾನಸಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವ ಅಂಕಣವಿದು. ನೀವೂ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು.

**ಡಾ. ವಿನೋದ ಛೆಬ್ಬಿ**
ಲೈಂಗಿಕ, ದಾಂಪತ್ಯ ಮತ್ತು ಮನೋಚಿಕಿತ್ಸಕರು

ಮಧ್ಯವಯಸ್ಕ. ವಿವಾಹಿತ. ಎರಡು ಸಲ ಮಗುವಾಗಿ ಬೇಗ ತೀರಿಕೊಂಡವು. ಹೆಂಡತಿ ಕೃಶದೇಹಿ ಆದರೂ ಸುಂದರಿ, ದುರ್ಬಲಳು. ಸಾಕಷ್ಟು ವೈದ್ಯೋಪಚಾರ ಪಡೆದರೂ ಸಣ್ಣಗೇ ಇದ್ದಾಳೆ. ನೆರೆ ಮನೆಯ ನರ್ಸ್ ಒಬ್ಬಳು ಇವಳನ್ನು ದಪ್ಪವಾಗಲು ಪ್ರೇರೇಪಿಸಿ, ಗಂಡನ ವೀರ್ಯವನ್ನು ಮುಖಮೈಥುನದ ಮೂಲಕ ದಿನಾಲೂ ಸೇವಿಸಿದರೆ ದಪ್ಪಗಾಗುತ್ತೀಯಾ ಎಂದಳು. ಇವಳು ಮೂರು ತಿಂಗಳಿಂದ ಒತ್ತಾಯಪೂರ್ವಕ ನನ್ನಿಂದ ವೀರ್ಯಸೇವನೆ ಮಾಡಿಸಿಕೊಂಡಳು. ಆದರೆ ಇತ್ತೀಚೆಗೆ ನನಗೆ ಕಾಮದಲ್ಲಿ ಆಸಕ್ತಿ ಕಡಿಮೆ ಆಗುತ್ತಿದೆ. ಹಾಗೂ ಉದ್ರೇಕ ಸಾಕಷ್ಟಾಗುತ್ತಿಲ್ಲ. ಅದಕ್ಕಾಗಿ ಆ ನರ್ಸ್ ಒಂದು ಭೀಕರ ಸಲಹೆಯನ್ನು ಹೆಂಡತಿಗೆ ಕೊಟ್ಟಿದ್ದಾಳೆ. ಅದೇನೆಂದರೆ ಸದೃಢ ಯುವಕನ ವೀರ್ಯವನ್ನು ಸೇವಿಸಿ, ಸಂಭೋಗಿಸಿದಲ್ಲಿ ಖಂಡಿತ ಮಕ್ಕಳಾಗುತ್ತವೆ ಎಂದು ಹೇಳಿದ್ದಾಳೆ. ನರ್ಸನ್ನು ನಾನು ತರಾಟೆಗೆ ತೆಗೆದುಕೊಂಡಾಗ ಆಕೆ ತುಂಬ ಹಳೆಯ ಪುಸ್ತಕವನ್ನು ಕೈಗಿತ್ತಳು. ಹೆಸರು ಆಯುರ್ವೇದ ಮತ್ತು ಆರೋಗ್ಯ. ಅದರಲ್ಲಿ ನಪುಂಸಕತೆ ಮತ್ತು ಪರಿಹಾರ ಎಂಬ ಅಧ್ಯಾಯದಲ್ಲಿ ಗಂಡುಕುದುರೆಯ ಅಥವಾ ಟಗರಿನ ವೃಷಣವನ್ನು ಸೇವಿಸುವುದರಿಂದ, ಹಾಗೂ ಸದೃಢ ಯುವಕನ ವೀರ್ಯವನ್ನು ಸೇವಿಸುವುದರಿಂದ ಷಂಡತ್ವ ನಿವಾರಣೆಯಾಗುತ್ತದೆ ಎಂದಿದೆ. ಇದು ನಿಜವೆ? ಯಾಕೆಂದರೆ ನನ್ನ ಕೈಕೆಳಗೆ ವಿಧೇಯ ಯುವಕನೊಬ್ಬ ಕೆಲಸ ಮಾಡುತ್ತಿದ್ದಾನೆ. ಅವನನ್ನು ಒಪ್ಪಿಸಿ ಎಂದು ಹೆಂಡತಿ ಒತ್ತಾಯಿಸುತ್ತಿದ್ದಾಳೆ. ಹೀಗೆ ವೀರ್ಯವನ್ನು ಬಾಯಿಯ ಮುಖಾಂತರ ಸೇವಿಸುವುದರಿಂದ ಲೈಂಗಿಕ ಶಕ್ತಿ ವೃದ್ಧಿಸುವುದು ಸತ್ಯವೆ? ಎಲ್ಲವೂ ಗೋಜಲಾಗಿದೆ.

ಹೌದು, ಗೋಜಲು ನಿಮಗಷ್ಟೇ ಅಲ್ಲ, ಮೂವರಿಗೂ ಆಗಿರುವುದು ಎದ್ದು ಕಾಣುತ್ತಿದೆ: ಯಾಕೆಂದರೆ ಮುಖ ಸೌಂದರ್ಯವನ್ನು ಹಾಗೂ ತೂಕವನ್ನು ಹೆಚ್ಚಿಸಲು ಹೋಗಿ ಷಂಡತ್ವ ನಿವಾರಣೆಗೆ ಚಿಕಿತ್ಸೆ ನಡೆದಿದೆ, ಅದೂ ಹೆಂಗಸಿಗೆ! ಇನ್ನು, 1) ಪ್ರಾಣಿಗಳ ವೃಷಣ ಸೇವನೆಯಿಂದ ಷಂಡತನ ನಿವಾರಣೆಯಾಗುತ್ತದೆ ಎಂಬುದು ಸಂಪೂರ್ಣ ಸತ್ಯಕ್ಕೆ ದೂರವಾದುದು. (ಪುಣ್ಯ, ಆ ಪುಸ್ತಕದಲ್ಲಿ ಯುವಕರ ವೃಷಣವನ್ನು ಸೇವಿಸಿ ಎಂದಿಲ್ಲವಲ್ಲ?) ಹಾಗೆ ಹೇಳುವುದಾದರೆ ಪ್ರಾಣಿಗಳ ಗ್ರಂಥಿಗಳನ್ನು ತಿನ್ನುವುದರಿಂದ ರಕ್ತದಲ್ಲಿ ಕೊಬ್ಬಿನಂಶ ಹೆಚ್ಚಾಗಿ ಇತರ ಕಾಯಿಲೆಗಳಿಗೆ ಹಾದಿಯಾಗಬಹುದು. 2) ಷಂಡತನ ಎಂಬ ಪದ ಗಂಡಿಗೆ ಮಾತ್ರ ಅನ್ವಯಿಸುತ್ತದೆ, ಹೆಣ್ಣಿಗಲ್ಲ! 3) ವೀರ್ಯವನ್ನು ಸೇವಿಸುವುದರಿಂದ ಮಕ್ಕಳಾಗುತ್ತವೆ ಎನ್ನುವುದು ಸಂಭೋಗದಿಂದ ಹೊಟ್ಟೆ ತುಂಬುತ್ತದೆ ಎನ್ನುವಷ್ಟೇ ಸತ್ಯದೂರ. 4) ವೀರ್ಯ ಸೇವನೆ ಅಥವಾ ಲೇಪನದಿಂದ ಸೌಂದರ್ಯ ಹೆಚ್ಚುತ್ತದೆ ಎನ್ನುವುದು ಮುಟ್ಟಿನ ಸ್ರಾವದ ಲೇಪನ ಅಥವಾ ಸೇವನೆಯಿಂದ ಗಂಡಿನ ಗಂಡಸುತನ ಹೆಚ್ಚುತ್ತದೆ ಎನ್ನುವಷ್ಟೇ ಹಾಸ್ಯಾಸ್ಪದ! 5) ವೀರ್ಯವು ಯೋನಿಯೊಳಗೆ ಹೋದರೆ ಗರ್ಭಧಾರಣೆ ಆದೀತೇ ವಿನಾ ಬಾಯಿಯೊಳಗೆ ಹೋದರಲ್ಲ. ಜಠರದೊಳಗಿನ ಆಮ್ಲದಿಂದ ಕರಗಿ ಜೀರ್ಣವಾಗುತ್ತದಷ್ಟೆ. ಹೀಗಾಗಿ ವೀರ್ಯವನ್ನು ಸೇವಿಸುವುದು ಒಂದು ಚಮಚೆ ಅನ್ನವನ್ನು ತಿಂದಷ್ಟೇ ಪ್ರಯೋಜನವಾಗುತ್ತದಷ್ಟೆ. 6) ನೀವು ಎರಡು ಸಲ ಗರ್ಭಧಾರಣೆಗೆ ಕಾರಣರಾಗಿದ್ದರಿಂದ ನಿಮ್ಮ ಫಲವತ್ತತೆಯ ಬಗೆಗೆ ಸಂದೇಹವಿಲ್ಲ. ಹೀಗಾಗಿ ನಿಮ್ಮ ಹೆಂಡತಿಯ ಗರ್ಭಧಾರಣೆಗೆ ಇನ್ನೊಬ್ಬರ ವೀರ್ಯ ಅಗತ್ಯವಿಲ್ಲ. ಇಷ್ಟಕ್ಕೂ ನಿಮ್ಮ ಹೆಂಡತಿ ಏನು ಬಯಸುತ್ತಿದ್ದಾರೆ? ಮಗುವನ್ನೋ, ಮುಖ ಸೌಂದರ್ಯವನ್ನೋ, ಅಥವಾ ಸ್ಥೂಲಕಾಯವನ್ನೋ? ಅವರ ಮುಖ ಸೌಂದರ್ಯನ್ನು ಪತಿಯಾದ ನೀವೇ ಮೆಚ್ಚಿದ್ದರೆ ಅದನ್ನು ಹೆಚ್ಚಿಸುವ ಅಗತ್ಯವಾದರೂ ಏನಿದೆ? ಕೃಶಕಾಯವು ಆರೋಗ್ಯದ ಸಂಕೇತ.

ಕೃಶಕಾಯರು ದೀರ್ಘಕಾಲ ಕಾಯಿಲೆಯಿಲ್ಲದೆ ದೀರ್ಘಾಯುಷಿಯಾಗಿ ಬಾಳಬಲ್ಲರು. ಇನ್ನು ಶಾರೀರಿಕ ದೌರ್ಬಲ್ಯವಿದ್ದರೆ ವ್ಯಾಯಾಮ ಹಾಗೂ ಪುಷ್ಟಿಕರ ಆಹಾರದಿಂದ ಸರಿಹೋಗುತ್ತದೆ. ಹೀಗಾಗಿ ವೀರ್ಯ ಸೇವನೆ, ವೃಷಣ ಸೇವನೆ ಎಲ್ಲ ಮೂಢನಂಬಿಕೆಯ ಪರಾಕಾಷ್ಠೆಯಷ್ಟೆ. ಹೀಗಾಗಿ ಈ ಹುಚ್ಚುತನದಿಂದ ಹೊರಬಂದು ಆರೋಗ್ಯಕರ ವಿಚಾರ ರೂಢಿಸಿಕೊಳ್ಳಿ. ಹೆಂಡತಿಗೆ ನರ್ಸಿನ ಪ್ರಭಾವದಿಂದ ಹೊರಬರಲು, ಇಲ್ಲವಾದರೆ ಆಕೆಯ ಸಂಪರ್ಕವನ್ನು ಕಡಿದುಕೊಳ್ಳಲು ವ್ಯವಸ್ಥೆ ಮಾಡಿ. ಮರೆತಿದ್ದೆ: ನಿಮಗೆ ಇತ್ತೀಚೆಗೆ ಸಾಕಷ್ಟಾಗುತ್ತಿಲ್ಲ ಎಂದಿದ್ದೀರಿ. ಹೆಂಡತಿಯ ಒತ್ತಾಯದ ನಡತೆಯಿಂದ ನಿಮ್ಮ ಕಾಮಾಸಕ್ತಿ ಕಡಿಮೆಯಾಗಿ ಹೀಗಾಗಿದ್ದರೆ ಅಡ್ಡಿಯಿಲ್ಲ. ಕಾಮಾಸಕ್ತಿ ಸಾಕಷ್ಟಿದ್ದರೂ ಶಿಶ್ನೋದ್ರೇಕವು ಸರಿಯಾಗಿಲ್ಲದಿದ್ದರೆ ಸ್ವಲ್ಪ ಗಮನ ಹರಿಸಿ. ಯಾಕೆಂದರೆ ಮಧ್ಯವಯಸ್ಕರಲ್ಲಿ ನಿಮಿರುದೌಬಲ್ಯ ಶುರುವಾದ ಎರಡು ವರ್ಷದಲ್ಲಿ ಹೃದಯದ ರೋಗ ಬರಬಹುದು ಎಂದು ಸಂಶೋಧನೆ ಹೇಳುತ್ತದೆ. ಹೀಗಾಗಿ ನೀವೊಂದು ಸಲ ಹೃದಯದ ತಪಾಸಣೆ ಮಾಡಿಸಿಕೊಂಡು ನಿಮ್ಮ ಆರೋಗ್ಯವನ್ನು ಖಚಿತಪಡಿಸಿಕೊಳ್ಳುವುದು ಸೂಕ್ತ.

ವಿವಾಹಿತ, 34 ವರ್ಷ. ಮಕ್ಕಳಿವೆ. ಲೈಂಗಿಕ ಜೀವನ ಚೆನ್ನಾಗಿದೆ. ಇತ್ತೀಚೆಗೆ ಸಂಭೋಗ ಕ್ರಿಯೆ ನಡೆಸುತ್ತಿದ್ದಾಗ ಶಿಶ್ನದಲ್ಲಿ ಏನೋ ತಡೆಯುಂಟಾದಂತೆ ಅನ್ನಿಸಿತು. ಶಿಶ್ನವನ್ನು ಹೊರತೆಗೆದಾಗ ಕೂಡಲೇ ರಕ್ತ ರಭಸದಿಂದ ಹೊರಗೆ ಹರಿಯಿತು. ಹತ್ತು ನಿಮಿಷಗಳ ಕಾಲ ಹರಿದು ಸುಮಾರು ಒಂದು ಲೀಟರ್‌ನಷ್ಟು ರಕ್ತ ಹೋಯಿತು. ಇದರಿಂದ ದಿಗ್ಭ್ರಾಂತನಾಗಿದ್ದೇನೆ. ವೈದ್ಯರಲ್ಲಿ ಪರೀಕ್ಷಿಸಿಕೊಂಡಾಗ ಏನೂ ತೊಂದರೆಯಿಲ್ಲವೆಂದು ಸಮಜಾಯಿಸಿದ್ದಾರೆ. ಮೇಲಾಗಿ ಇದೊಂದು ಅಪರೂಪದ ಘಟನೆ ಎಂದು ಹೇಳಿದ್ದಾರೆ. ಕಾರಣವೇನು?

ಶಿಶ್ನದೊಳಗೆ ಉದ್ದಕ್ಕೂ ಮೂರು ಸ್ಪಂಜಿನ ದಿಂಡುಗಳಿವೆ. ಇವುಗಳಲ್ಲಿ ಮೇಲಿನ ಎರಡು ದಿಂಡುಗಳಲ್ಲಿ ರಕ್ತವು ತುಂಬಿ ಊದಿಕೊಂಡು ಶಿಶ್ನದ ಬಿರುಸುತನ ಉಂಟಾಗುತ್ತದೆ. ಅಂದರೆ ಶಿಶ್ನದ ಬಿರುಸುತನಕ್ಕೆ ಒಳಗೆ ಒತ್ತಡದಲ್ಲಿ ಸೆರೆಯಾಗಿರುವ ರಕ್ತವೇ ಕಾರಣ. ಅಪರೂಪಕ್ಕೆ ಈ ದಿಂಡಿನ ಯಾವುದೋ ಜಾಗವು ದುರ್ಬಲವಾಗಿರುವ ಸಾಧ್ಯತೆಯಿದೆ. ಈ ಜಾಗವು ಒತ್ತಡ ತಾಳದೆ ಬಿರುಕು ಬಿಟ್ಟಾಗ (ತುಂಬಿದ ಕೆರೆಯ ಕಟ್ಟೆ ಬಿರುಕು ಬಿಟ್ಟಂತೆ) ರಕ್ತಸ್ರಾವವಾಗಿದೆ, ಅಷ್ಟೆ.

ಇನ್ನು ಪರಿಹಾರ: ಇದು ಅನುಭವಿಸಲು ಭಯಾನಕವೆನ್ನಿಸಿದರೂ ತೊಂದರೆಯೇನಿಲ್ಲ. ಎರಡು ವಾರ ಬಿಟ್ಟು ಸರಿಹೋಗುತ್ತದೆ. ಇನ್ನೊಂದು ಸಲ ಆಗುವ ಸಂಭವ ತೀರ ಕಡಿಮೆ. ಒಂದು ವೇಳೆ ಹೀಗೆ ಮತ್ತೆ ಮತ್ತೆ ಆಗುತ್ತಿದ್ದರೆ ಚಿಕ್ಕ ಶಸ್ತ್ರಚಿಕಿತ್ಸೆಯಿಂದ ಇದನ್ನು ಸರಿಪಡಿಸಬಹುದು. ಹೆಚ್ಚಿನ ವಿವರಗಳಿಗಾಗಿ ಬೆಂಗಳೂರಿನ ಮೆಡಿಸೆಕ್ಸ್ ಫೌಂಡೇಶನ್ (ದೂ. 080-23101205, 23111666) ಸಂಸ್ಥೆಯನ್ನು ಸಂಪರ್ಕಿಸಿ.

ಲೈಂಗಿಕ ಸಹಾಯವಾಣಿ: ಲೈಂಗಿಕ ಸಮಸ್ಯೆಗಳ ತುರ್ತು ಪರಿಹಾರಕ್ಕಾಗಿ ಡಾ. ವಿನೋದ ಛೆಬ್ಬಿಯವರನ್ನು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಬೆಂಗಳೂರಿನ ದೂರವಾಣಿ; (080) 23111666 ಅಥವಾ 23101205ರ ಮೂಲಕ ಸಂಪರ್ಕಿಸಬಹುದು. ದೂರವಾಣಿ ಸಿಗದಿದ್ದಲ್ಲಿ ಪತ್ರದ ಮೂಲಕ ತಮ್ಮ ಮೊಬೈಲ್ ಸಂಖ್ಯೆಯನ್ನು ತಿಳಿಸಿ ವೈದ್ಯರ ಉತ್ತರಕ್ಕಾಗಿ ಕಾಯಬಹುದು. ಅಥವಾ www.medisex.org ಪರಿಶೀಲಿಸಬಹುದು.

**ನಿಮ್ಮ ಪ್ರಶ್ನೆಗಳನ್ನು ಸಂಪಾದಕರು, 'ಸುಧಾ' 'ಸುಖೀಭವ' ವಿಭಾಗ, ನಂ. 75 ಎಂ.ಜಿ. ರಸ್ತೆ, ಬೆಂಗಳೂರು-01 ವಿಳಾಸಕ್ಕೆ ಕಳುಹಿಸಿ**